# ಕರ್ನಾಟಕ ವಿಧಾನ ಪರಿಷತ್ತು
## ಚುಕ್ಕೆ ಗುರುತಿಲ್ಲದ ಪ್ರಶ್ನೆ

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 946(1098)
ಉತ್ತರಿಸಬೇಕಾದ ದಿನಾಂಕ : 22/09/2022
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು.

| ಕ್ರ. ಸಂ | ಪ್ರಶ್ನೆ | ಇಲಾಖೆಯ ಮಾಹಿತಿ |
|---|---|---|
| ಅ) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇರುವ ವಿವಿಧ ಯೋಜನೆಗಳಾವುವು; (ವಿವರವಾದ ಮಾಹಿತಿ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇರುವ ವಿವಿಧ ಯೋಜನೆಗಳ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ಈ ಯೋಜನೆಗಳಲ್ಲಿ ಎಷ್ಟು ಯೋಜನೆಗಳು ನೇರವಾಗಿ ಗ್ರಾಮೀಣ ಜನರ ಬದುಕಿಗೆ ಸಹಾಯಕಾರಿಯಾಗಿವೆ; (ವಿವರ ನೀಡುವುದು) | ಇಲಾಖೆಯಿಂದ ಅನುಷ್ಠಾನಿಸಲಾಗುತ್ತಿರುವ ಯೋಜನೆಗಳ ಪೈಕಿ ಅಕುಶಲ ದೈಹಿಕ ಉದ್ಯೋಗ ಒದಗಿಸುವ MGNREG ಯೋಜನೆ, ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಸಹಾಯ ಧನ ನೀಡುವ ಸ್ವಚ್ಛ ಭಾರತ ಅಭಿಯಾನ ಯೋಜನೆ ಹಾಗೂ ಪ್ರತಿ ಮನೆಗೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವ ಜಲಜೀವನ್ ಮಿಷನ್ ಯೋಜನೆಗಳು ನೇರವಾಗಿ ಗ್ರಾಮೀಣ ಜನರ ಬದುಕಿಗೆ ಸಹಾಯಕಾರಿಯಾಗಿವೆ. |
| ಇ) | ಕಳೆದ 3 ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಂಡ ಬೃಹತ್ ಯೋಜನೆಗಳಾವುವು; (ವಿವರ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಕಳೆದ 03 ವರ್ಷಗಳಲ್ಲಿ ಅನುಷ್ಠಾನಗೊಂಡ ಬೃಹತ್ ಯೋಜನೆಗಳ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಈ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಳೆದ 3 ವರ್ಷಗಳಲ್ಲಿ ಬೆಳಕಿಗೆ ಬಂದ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರಗಳ ಪ್ರಕರಣಗಳೆಷ್ಟು; ಇದಕ್ಕೆ ಕಾರಣರಾದ ತಪ್ಪಿತಸ್ಥ ಅಧಿಕಾರಿಗಳು ಯಾರ್ಯಾರು; (ಹೆಸರು, ವಿಳಾಸದೊಂದಿಗೆ ವಿವರ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಳೆದ 03 ವರ್ಷಗಳಲ್ಲಿ ಬೆಳಕಿಗೆ ಬಂದ ಅವ್ಯವಹಾರ ಪ್ರಕರಣಗಳು ಹಾಗೂ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮದ ವಿವರವನ್ನು ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ **ಅನುಬಂಧ-03** ರಲ್ಲಿ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ **ಅನುಬಂಧ-4** ರಲ್ಲಿ ಒದಗಿಸಲಾಗಿದೆ. |
| ಉ) | ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು? (ಮಾಹಿತಿ ನೀಡುವುದು) | |

ಸಂಖ್ಯೆ: ಗ್ರಾಅಪ /107/ಯೋಉಮಾ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

# ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1098

## ಅನುಬಂಧ-1

| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಯೋಜನೆಗಳ ವಿವರ. | |
|---|---|
| ಕ್ರ. ಸಂ | ಯೋಜನೆ |
| 1 | ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ |
| 2 | ಶ್ಯಾಮ್ ಪ್ರಸಾದ್ ಮುಖರ್ಜಿ ರೂರ್ಬನ್ ಅಭಿಯಾನ ಯೋಜನೆ |
| 3 | ಸ್ವಚ್ಛ ಭಾರತ ಅಭಿಯಾನ |
| 4 | ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ) |
| 5 | ಸಿ.ಎಂ.ಜಿ.ಎಸ್.ವೈ |
| 6 | ಪಿ.ಎಂ.ಜಿ.ಎಸ್.ವೈ |
| 7 | ರಸ್ತೆಗಳು – ಟಾಸ್ಕ್ ಫೋರ್ಸ್ |
| 8 | ಪಿ.ಎಂ.ಜಿ.ಎಸ್.ವೈ. ರಸ್ತೆಗಳ ನಿರ್ವಹಣೆ |
| 9 | ನಮ್ಮ ಗ್ರಾಮ ನಮ್ಮ ರಸ್ತೆ |
| 10 | ಆರ್.ಐ.ಡಿ.ಎಫ್ ನಬಾರ್ಡ್ |
| 11 | ಸುವರ್ಣ ಗ್ರಾಮೋದಯ/ ಗ್ರಾಮ ವಿಕಾಸ/ ಮುಖ್ಯ ಮಂತ್ರಿ ಗ್ರಾಮ ವಿಕಾಸ |
| 12 | ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ |
| 13 | 15ನೇ ಹಣಕಾಸು ಆಯೋಗದ ಅನುದಾನ |
| 14 | ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ (ಅನಿರ್ಬಂಧಿತ ಅನುದಾನ) |
| 15 | ಗ್ರಾಮ ಪಂಚಾಯಿತಿ ಅಭಿವೃದ್ಧಿ ಅನುದಾನ (ಶಾಸನಬದ್ಧ ಅನುದಾನ) |
| 16 | ತಾಲ್ಲೂಕು ಪಂಚಾಯಿತಿ ಅಭಿವೃದ್ಧಿ ಅನುದಾನ (ಅನಿರ್ಬಂಧಿತ ಅನುದಾನ) |
| 17 | ಜಲಾಮೃತ |
| 18 | ರಾಷ್ಟ್ರೀಯ ಜೈವಾ ಅನಿಲ ಯೋಜನೆ |
| 19 | ಜೀತವಿಮುಕ್ತರ ಕಾರ್ಯಕ್ರಮ |

# ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1098

## ಅನುಬಂಧ-2

| ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದಕಳೆದ 03 ವರ್ಷಗಳ ಅನುಷ್ಠಾನಗೊಂಡ ಬೃಹತ್ ಯೋಜನೆಗಳನ್ನು | |
|---|---|
| ಕ್ರ. ಸಂ | ಯೋಜನೆ |
| 1 | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ |
| 2 | ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ/ಜಲ ಜೀವನ್ ಮಿಷನ್ |
| 3 | ಸ್ವಚ್ಛ ಭಾರತ ಅಭಿಯಾನ |
| 4 | ಸುವರ್ಣ ಗ್ರಾಮೋದಯ/ ಗ್ರಾಮ ವಿಕಾಸ/ ಮುಖ್ಯಮಂತ್ರಿ ಗ್ರಾಮ ವಿಕಾಸ |
| 5 | ಪಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ |
| 6 | ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ |
| 7 | 15ನೇ ಹಣಕಾಸು ಯೋಜನೆ |

# ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1098

## ಅನುಬಂಧ-3

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಕೋಲಾರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದ ಅವ್ಯವಹಾರ ಪ್ರಕರಣಗಳ ವಿವರ**

| ಕ್ರ.ಸಂ | ನೌಕರರ ಹೆಸರು ಮತ್ತು ಹುದ್ದೆ ಸ್ಥಳ | ಪ್ರಕರಣ | ಹಣ ದುರುಪಯೋಗದ ಮೊತ್ತ | ಕೈಗೊಂಡ ಕ್ರಮ /ಪ್ರಸ್ತುತದ ಸ್ಥಿತಿ |
|---|---|---|---|---|
| **2019-20** | | | | |
| 1 | ಶ್ರೀ ನಾಗರಾಜ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುದುವಾಡಿ ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು. | ಕೋಲಾರ ತಾಲ್ಲೂಕು ಮುದುವಾಡಿ ಗ್ರಾಮ ಪಂಚಾಯಿತಿ ಜನಪನಹಳ್ಳಿ ಗ್ರಾಮದ ಕೆರೆಯ ಕಾಲುವೆ ಪಕ್ಕದಲ್ಲಿ ಗೋಕುಂಟೆ ನಿರ್ಮಾಣ | 9447.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿ/ ಟಿ.ಸಿ ರವರಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಕೋಲಾರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |
| 2 | ಶ್ರೀ ವೆಂಕಟರಾಮರೆಡ್ಡಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಂಗೊಂಡಹಳ್ಳಿ ಗ್ರಾಮ ಪಂಚಾಯಿತಿ, ಮುಳಬಾಗಿಲು ತಾಲ್ಲೂಕು. | ಮುಳಬಾಗಿಲು ತಾಲ್ಲೂಕು ಅಂಗೊಂಡಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನರೇಗಾ ಜಾಬ್ ಕಾರ್ಡ್ ಬಳಸಿ ಸತ್ತವರ ಹೆಸರಿನಲ್ಲಿ ಹಾಗೂ ವಿದ್ಯಾರ್ಥಿನಿ ಹೆಸರಿನಲ್ಲಿ<br>ನಕಲಿ ಹಾಜರಾತಿ ತೋರಿಸಿ ಸರ್ಕಾರದ ಹಣ ದುರುಪಯೋಗ ಮಾಡಿ ಭ್ರಷ್ಟಾಚಾರವೆಸಗಿರುವ ಪಿ.ಡಿ.ಓ ಮತ್ತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ | 2360.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿ/ ಟಿ.ಸಿ ರವರಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಮುಳಬಾಗಿಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |
| 3 | ಶ್ರೀ ಚಿನ್ನಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಲ್ದಿಗಾನಹಳ್ಳಿ ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು. | ಶ್ರೀನಿವಾಸಪುರ ತಾಲ್ಲೂಕು ಚಲ್ದಿಗಾನಹಳ್ಳಿ ಗ್ರಾಮ ಪಂಚಾಯಿತಿ ಹೆಬ್ಬಟ ಗ್ರಾಮದ ಸರ್ವೆ ನಂ.53 (ಹೊಸ ಸಂಖ್ಯೆ:238)ರಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಲ್ಲಿ ನಡೆಯುತ್ತಿರುವ ಕಾಮಗಾರಿಗೆ ಹಣ ಪಾವತಿಯನ್ನು ನಿಲ್ಲಿಸುವಂತೆ ಕೋರಿ ಸಲ್ಲಿಸಿದ ದೂರು ಅರ್ಜಿ ಬಗ್ಗೆ.<br>Memorandum on behalf of the village people and General public to stop releasing of payment in respect of the work done in Sy. No.53, New bifurcated Sy.No.238, Hebbata Village, Srinivasapur Taluk. The work Allocated under MGNREGA scheme. | 7760.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿ/ ಟಿ.ಸಿ ರವರಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಶ್ರೀನಿವಾಸಪುರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |

ಡಿ

| ಕ್ರ.ಸಂ | ನೌಕರರ ಹೆಸರು ಮತ್ತು ಹುದ್ದೆ ಸ್ಥಳ | ಪ್ರಕರಣ | ಹಣ ದುರುಪಯೋಗದ ಮೊತ್ತ | ಕೈಗೊಂಡ ಕ್ರಮ /ಪ್ರಸ್ತುತದ ಸ್ಥಿತಿ |
|---|---|---|---|---|
| 4 | ಶ್ರೀ ಚಂದ್ರಶೇಖರ್ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಆರಿಕುಂಟೆ ಗ್ರಾಮ ಪಂಚಾಯಿತಿ, ಶ್ರೀನಿವಾಸಪುರ ತಾಲ್ಲೂಕು. | ಶ್ರೀನಿವಾಸಪುರ ತಾಲ್ಲೂಕು ಆರಿಕುಂಟೆ ಗ್ರಾಮ ಪಂಚಾಯಿತಿ ಆರಿಕುಂಟೆ ಗ್ರಾಮದಲ್ಲಿ ಕಳಪೆ ಡ್ರೈನೇಜ್ ಕಾಮಗಾರಿ ಮಾಡುತ್ತಿರುವುದರ ಬಗ್ಗೆ. 20.396 ಘನ ಮೀಟರ್ ಕಾಮಗಾರಿಗೆ ತಗಲುವ ರೂ.77,301/- (ರೂಪಾಯಿ ಎಪ್ಪತ್ತೇಳು ಸಾವಿರದ ಮೂರುನೂರ ಒಂದು ಮಾತ್ರ)ಗಳನ್ನು ಪಾವತಿಗೆ ಅನರ್ಹವೆಂದು ಪರಿಗಣಿಸಿ ಕಾಮಗಾರಿಯ ಒಟ್ಟು ಮೊತ್ತದಲ್ಲಿ ಕಡಿತಗೊಳಿಸಬೇಕೆಂದು ತೀರ್ಪು ನೀಡಲಾಗಿದೆ. | 77301.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿ/ ಟಿ.ಸಿ ರವರಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಶ್ರೀನಿವಾಸಪುರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |
| 5 | ಶ್ರೀ ಶಂಕರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಐನೋರಹೊಸಹಳ್ಳಿ ಗ್ರಾಮ ಪಂಚಾಯಿತಿ, ಬಂಗಾರಪೇಟೆ ತಾಲ್ಲೂಕು. | ಬಂಗಾರಪೇಟೆ ತಾ ಐನೋರಹೊಸಹಳ್ಳಿ ಗ್ರಾ ಪಂ ನಕಲಿ ದಾಖಲೆ ಸೃಷ್ಟಿಸಿಕೊಂಡು ಸರ್ಕಾರಿ ಹಣ ದುರುಪಯೋಗಪಡಿಸಿಕೊಂಡಿರುವ ದೂರು ಸಲ್ಲಿಸಿರುವ ಬಗ್ಗೆ.<br>ಜಾಹೀರಾತು ಪ್ರಕಟಣೆ ಶುಲ್ಕ ಪಡೆದುಕೊಂಡವರಿಂದ ನಿಯಮಾನುಸಾರ ವಸೂಲಿ ಮಾಡಿ ಸರ್ಕಾರಕ್ಕೆ ಜಮೆ ಮಾಡಬೇಕೆಂದು ತೀರ್ಪು ನೀಡಲಾಗಿದೆ. | 15600.00 | ಒಂಬುಡ್ಸ್‌ಮನ್‌ರವರ ಆದೇಶವನ್ನು ರದ್ದುಪಡಿಸಿದೆ. |
| **2020-21** | | | | |
| 1 | ಶ್ರೀ ಸೋಮಶೇಖರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ತೊರದೇವಂಡಹಳ್ಳಿ ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು. | ಕೋಲಾರ ತಾ ತೋರದೇವಂಡಹಳ್ಳಿ ಗ್ರಾ ಮ ಪಂಚಾಯಿತಿಯ ಸರ್ಕಾರಿ ನಿಯಮಗಳನ್ನು ಗಾಳಿಗೆ ತೂರಿ ಉದ್ಯೋಗ ಖಾತರಿ ಯೋಜನೆಯಲ್ಲಿ ಬಡ ಜನರಿಗೆ ಕೆಲಸ ನಿಡದೇ ಯಂತ್ರಗಳಿಂದ ಕಾಮಗಾರಿಗಳನ್ನು ಮಾಡುತ್ತಿರುವ ಬಗ್ಗೆ<br>1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರೂ.25,000/-<br>2) ತಾಂತ್ರಿಕ ಸಹಾಯಕ ಅಭಿಯಂತರರು ರೂ.25,000/- | 50000.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಕೋಲಾರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |

| ಕ್ರ.ಸಂ | ನೌಕರರ ಹೆಸರು ಮತ್ತು ಹುದ್ದೆ ಸ್ಥಳ | ಪ್ರಕರಣ | ಹಣ ದುರುಪಯೋಗದ ಮೊತ್ತ | ಕೈಗೊಂಡ ಕ್ರಮ /ಪ್ರಸ್ತುತದ ಸ್ಥಿತಿ |
|---|---|---|---|---|
| 2 | ಶ್ರೀಮತಿ ಮೇಘ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳಮಾರನಹಳ್ಳಿ ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು. | ಕೋಲಾರ ತಾಲ್ಲೂಕು ಬೆಳಮಾರನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ನಡೆದಿರುವ ಕಾಮಗಾರಿಗಳ ಕಳಪೆ ಗುಣಮಟ್ಟದ ಸಂಬಂಧ ಕೂಲಂಕುಷ ತನಿಖೆ ಮಾಡಿ ಅಕ್ರಮವನ್ನು ಬಯಲಿಗೆ ತಂದು ಕಾನೂನುನ ರೀತ್ಯಾ ಕ್ರಮ ವಹಿಸಿ ಸೂಕ್ತ ಕ್ರಮ ಜರುಗಿಸಲು ಕೋರುವ ಬಗ್ಗೆ.<br>1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರೂ.10,000/-<br>2) ತಾಂತ್ರಿಕ ಸಹಾಯಕ ಅಭಿಯಂತರರು ರೂ.10,000/- | 20000.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಕೋಲಾರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |
| 3 | ಶ್ರೀ ಮುನಿರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕುರುಗಲ್ ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು. | ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ, ಕುರುಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ನಡೆದಿರುವ ರಾಜುಕಾಲುವೆಅಭಿವೃದ್ಧಿ ಮತ್ತು ರಿವಿಟ್‌ಮೆಂಟ್ ಕಾಮಗಾರಿಗಳ ಕಳಪೆ ಗುಣಮಟ್ಟದ ಸಂಬಂಧ ಕೂಲಂಕುಷ ತನಿಖೆ ಮಾಡಿ ಅಕ್ರಮವನ್ನು ಬಯಲಿಗೆ ತಂದು ಅಕ್ರಮಗಳ ಎಸಗಿರುವವರ ವಿರುದ್ಧ ಕಾನೂನುನ ರೀತ್ಯಾ ಕ್ರಮ ವಹಿಸಿ ಸೂಕ್ತ ಕ್ರಮ ಜರುಗಿಸಲು ಕೋರುವ ಬಗ್ಗೆ.<br>1) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರೂ.5.00ಲಕ್ಷ<br>2) ತಾಂತ್ರಿಕ ಸಹಾಯಕ ಅಭಿಯಂತರರು ರೂ.4.00ಲಕ್ಷ<br>3) ಡೇಟಾ ಎಂಟ್ರಿ ಆಪರೇಟರ್ ರೂ.42,075/- | 942075.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಕೋಲಾರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |
| **2021-22** | | | | |
| 1 | ಶ್ರೀಮತಿ ಕಮಲ ವಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮಾರ್ಜೇನಹಳ್ಳಿ ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು. | ಮಾರ್ಜೇನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಫಲಾನುಭವಿಗಳಿಗೆ ಪಾವತಸಿರುವ ಪ್ರೋತ್ಸಾಹ ಧನದಲ್ಲಿ ಅವ್ಯವಹಾರದ ಬಗ್ಗೆ . | 16,00,000/- | ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ. |

5

| ಕ್ರ.ಸಂ | ನೌಕರರ ಹೆಸರು ಮತ್ತು ಹುದ್ದೆ ಸ್ಥಳ | ಪ್ರಕರಣ | ಹಣ ದುರುಪಯೋಗದ ಮೊತ್ತ | ಕೈಗೊಂಡ ಕ್ರಮ /ಪ್ರಸ್ತುತದ ಸ್ಥಿತಿ |
|---|---|---|---|---|
| 2 | ಶ್ರೀ ಮುನಿರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನರಸಾಪುರ ಗ್ರಾಮ ಪಂಚಾಯಿತಿ, ಕೋಲಾರ ತಾಲ್ಲೂಕು. | ಕೋಲಾರ ತಾ ನರಸಾಪುರ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಎಂ.ಜಿ.ಎನ್.ಆರ್.ಇ.ಜಿ.ಎ ಕಾಮಗಾರಿಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ದೂರು. | 34443.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಕೋಲಾರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |
| 3 | ಶ್ರೀ ಕಾಳಪ್ಪ, ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಕೋಲಾರ | ಕೋಲಾರ ತಾಲ್ಲೂಕು ಮದನಹಳ್ಳಿ ಗ್ರಾ ಪಂ ರೇಷ್ಮೆ ಇಲಾಖೆಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನಯಡಿ ಹಣ ದುರುಪಯೋಗ ಮಾಡಿರುವ ಬಗ್ಗೆ ತನಿಖೆ ನಡೆಸಿ ವರದಿ ನೀಡುವ ಕುರಿತು | 345117.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಉಪ ನಿರ್ದೇಶಕರು, ರೇಷ್ಮೆ ಇಲಾಖೆ ರವರಿಗೆ ಸೂಚಿಸಿದೆ. |
| 4 | ಶ್ರೀಮತಿ ಚಂದ್ರಕಲಾ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರಾಮಸಾಗರ ಗ್ರಾಮ ಪಂಚಾಯಿತಿ, ಕೆ.ಜಿ.ಎಫ್. ತಾಲ್ಲೂಕು. | ಕೆ.ಜಿ.ಎಫ್ ತಾ ರಾಮಸಾಗರ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಇಂಜನಿಯರ್ ರವರು 1ನೇ ಫ-ಖಆ-1519002038/ ಖಅ/ 93393042892268709 ಮತ್ತು 2ನೇ ಫ-ಖಆ-19002038/ಖಅ/933930428922719ರಸ್ತೆ ಕಾಮಗಾರಿಗಳನ್ನು ಅತೀ ಕೆಳ ದರ್ಜೆಯ ಕಳಪೆಯಾಗಿ ಕಾಮಗಾರಿಗಳು ನಿರ್ವಹಿಸಿರುವುದರಿಂದ ಈ ರಸ್ತೆಗಳ ಗುಣಮಟ್ಟದ ತನಿಖೆ ಕ್ರಮ ಇತ್ಯರ್ಥ ಆಗುವ ತನಕ ಈ ಎರಡು ರಸ್ತೆಗಳ ಸಪ್ಲೆ ಬಿಲ್ಲು ಪಾವತಿ ತಡೆಹಿಡಿದು ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂ ನಷ್ಟ ಆಗದಂತೆ ಕ್ರಮವಹಿಸಲು ಕೋರುತ್ತಾ ಯತ್ನಿಸಿರುವವರ ಮೇಲೆ ತುರ್ತಾಗಿ ಶಿಸ್ತು ಕಾನೂನು ಕ್ರಮ ನಿರ್ವಹಿಸಬೇಕೆಂದು ಕೋರಿದೆ.<br>1) ತಾಂತ್ರಿಕ ಸಹಾಯಕ ಅಭಿಯಂತರರುರೂ.28,500/-<br>2) ತಾಂತ್ರಿಕ ಸಂಯೋಜಕರುರೂ.17,000/-<br>3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಿಂದ ರೂ.11,375/- | 56875 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಕೋಲಾರ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |

| ಕ್ರ.ಸಂ | ನೌಕರರ ಹೆಸರು ಮತ್ತು ಹುದ್ದೆ ಸ್ಥಳ | ಪ್ರಕರಣ | ಹಣ ದುರುಪಯೋಗದ ಮೊತ್ತ | ಕೈಗೊಂಡ ಕ್ರಮ /ಪ್ರಸ್ತುತದ ಸ್ಥಿತಿ |
|---|---|---|---|---|
| 5 | ಶ್ರೀ ಕಾಳಪ್ಪ, ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಕೋಲಾರ | ಕೋಲಾರ ತಾಲ್ಲೂಕು ಮದನಹಳ್ಳಿ ಗ್ರಾ ಪಂ ರೇಷ್ಮೆ ಇಲಾಖೆಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಹಣ ದುರುಪಯೋಗ ಮಾಡಿರುವ ಬಗ್ಗೆ ತನಿಖೆ ನಡೆಸಿ ವರದಿ ನೀಡುವ ಕುರಿತು. | 169325.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಉಪ ನಿರ್ದೇಶಕರು, ರೇಷ್ಮೆ ಇಲಾಖೆ ರವರಿಗೆ ಸೂಚಿಸಿದೆ. |
| 6 | ಶ್ರೀ ವಸಂತ್ ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೇತಗಾನಹಳ್ಳಿ ಗ್ರಾಮ ಪಂಚಾಯಿತಿ, ಬಂಗಾರಪೇಟೆ ತಾಲ್ಲೂಕು. | ಬಂಗಾರಪೇಟೆ ತಾ ಕೇತಗಾನಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ನರೇಗಾ ಕಾಮಗಾರಿಗಳು ಮಾಡದೆ ಬಿಲ್‌ಗಳು ಮಾಡಿಕೊಂಡಿರುವ ಬಗ್ಗೆ ದೂರು. | 39976.00 | ಸದರಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಸೂಲಿ ಮಾಡಿ ಎಸ್.ಇ.ಜಿ.ಎಫ್. ಖಾತೆಗೆ ಜಮೆ ಮಾಡಲು ಸಂಬಂಧಪಟ್ಟ ಬಂಗಾರಪೇಟೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ. |

# ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1098

# ಅನುಬಂಧ-4

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದ ಅವ್ಯವಹಾರ ಪ್ರಕರಣಗಳ ವಿವರ**

| ಕ್ರ.ಸಂ. | ನೌಕರರ ಹೆಸರು ಮತ್ತು ಹುದ್ದೆ, ಸ್ಥಳ | ಪ್ರಕರಣ | ಹಣ ದುರುಪಯೋಗದ ಮೊತ್ತ | ಕೈಗೊಂಡ ಕ್ರಮ /ಪ್ರಸ್ತುತದ ಸ್ಥಿತಿ |
|---|---|---|---|---|
| 1 | ಶ್ರೀ ಕೆ ಎಸ್ ಮಧು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪ್ರಸ್ತುತ ಹಂಡಿಗನಾಳ ಗ್ರಾಮ ಪಂಚಾಯತಿ, ಶಿಡ್ಲಘಟ್ಟ ತಾಲ್ಲೂಕು | ಶಿಡ್ಲಘಟ್ಟ ತಾಲ್ಲೂಕು ಹೊಸಪೇಟೆ ಗ್ರಾಮ ಪಂಚಾಯತಿಯ ನರೇಗ ಯೋಜನೆಯಡಿ ಅನುದಾನ ದುರುಪಯೋಗ | 2,69.177/- | ಇಲಾಖಾ ವಿಚಾರಣಾ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ |
| 2 | ಶ್ರೀ ಫಣೀಂದ್ರ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪ್ರಸ್ತುತ ಕೋರ್ಲಪರ್ತಿ ಗ್ರಾಮ ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು | ಗುಡಿಬಂಡೆ ತಾಲ್ಲೂಕು ಎಲ್ಲೋಡು ಗ್ರಾಮ ಪಂಚಾಯತಿಯಲ್ಲಿ 15 ನೇ ಹಣಕಾಸು ಯೋಜನೆಯಡಿ ಹಣ ದುರುಪಯೋಗ ಪಡಿಸಿಕೊಂಡಿರುವುದು. | 18,49,703/- | ಸದರಿ ನೌಕರರನ್ನು ಅಮಾನತ್ತುಗೊಳಿಸಿ ಇಲಾಖಾ ವಿಚಾರಣಾ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ |
| 3 | ಶ್ರೀ ವೆಂಕಟರವಣಪ್ಪ ಗ್ರೇಡ್-2 ಗ್ರಾಮ ಪಂಚಾಯತಿ ಕಾರ್ಯದರ್ಶಿ, ಪ್ರಸ್ತುತ ಅಮಾನತ್ತಿನಲ್ಲಿರುತ್ತಾರೆ | ಬಾಗೇಪಲ್ಲಿ ತಾಲ್ಲೂಕು ಗೊರ್ತಪಲ್ಲಿ ಗ್ರಾಮ ಪಂಚಾಯತಿಯ ಪ್ರಭಾರ ಪಂಚಾಯತಿ ಅಬಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ 15 ನೇ ಹಣಕಾಸು ಯೋಜನೆಯ ಅನುದಾನವನ್ನು ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾದ್ಯಕ್ಷರ ಹೆಸರಿನಲ್ಲಿರುವ ಸಂಸ್ಥೆಗೆ ದುರುಪಯೋಗ ಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ | 15,45,973/- | ಸದರಿ ನೌಕರರನ್ನು ಅಮಾನತ್ತುಗೊಳಿಸಿದೆ ಹಾಗೂ ಪ್ರಕರಣ ವಿಚಾರಣೆ ಹಂತದಲ್ಲಿರುತ್ತದೆ. |
| 4 | ಶ್ರೀಮತಿ ಆಲಿಯಾಸ್ ನಿಲೂಫರ್ ಎಂ ಎ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪ್ರಸ್ತುತ ತಿಮ್ಮಂಪಲ್ಲಿ ಗ್ರಾಮ ಪಂಚಾಯತಿ, ಬಾಗೇಪಲ್ಲಿ ತಾಲ್ಲೂಕು | ಬಾಗೇಪಲ್ಲಿ ತಾಲ್ಲೂಕು ಗೊರ್ತಪಲ್ಲಿ ಗ್ರಾಮ ಪಂಚಾಯತಿಯಲ್ಲಿ ಗ್ರಾಮ ವಿಕಾಸ ಯೋಜನೆಯ ಅನುದಾನ ದುರುಪಯೋಗ | 7,00,000/- | ಇಲಾಖಾ ವಿಚಾರಣಾ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ |